Sri H. SIDDAVEERAPPA.—It is the decision of the Government.

ಜನಾಬ್ ಜೆ. ಮಹಮದ್ ಇಮಾಂರವರು.—ಯಾವ ಆಧಾರದ ಮೇಲೆ ಹಾಗೆ ಹೇಳುತ್ತಾರೆ, ಸರ್ಕಾರದ ವರು ? It is wholesale condemnation of the public.

Sri H. SIDDAVEERAPPA—Not at all. Among the men available, the best men have been taken.

ಜನಾಬ್ ಜೆ. ಮಹಮ್ಮದ್ ಇಮಾಂರವರು.—ಆರ್. ಜಿ. ಸಿದ್ದಪ್ಪ ಎಂಬವರಿದ್ದಾರೆ. ಅವರಿಗೇನು ಕ್ವಾಲಿಫಿಕೇಷ್ ?

Sri H. SIDDAVEERAPPA.—He was serving there in the transport authority earlier and he was a man who was fit to be put into that committee.

ಜನಾಬ್ ಜೆ. ಮಹಮದ್ ಇಮಾಂರವರು.—ಅವರಿಗೇನೋ ಈ ಅನುಭವವಿದೆ; ಇದೊಂದು ಕ್ವಾಲಿಫಿಕೇಷ್. ಅದರಲ್ಲಿರುವ ಮಿಕ್ಕವರಿಗೆ ಯಾರ್ಯಾರಿಗೆ ಏನೇನು ಕ್ವಾಲಿಫಿಕೇಷ್ ಇದೆ ?

Mr. SPEAKER.—There are so many factors governing the selection.

ಶ್ರೀ ಎಂ. ಶಂಕರಲಿಂಗೇಗೌಡರು (ನಾಗಮಂಗಲ).—ಟಿಕೆಟ್‌ಮಾರುವವನನ್ನು ನೇಮಕಮಾಡಿದ್ದೀರಾ? ನಾಗಮಂಗಲದಿಂದ ಶಂಕರಲಿಂಗೇಗೌಡ ಬೇಡ ! (ನಗು!)

ಶ್ರೀ ಎಚ್ ಸಿದ್ದವೀರಪ್ಪನವರು.—ನೋಟೀಸ್.

ಶ್ರೀ ಎಂ. ರಾಜಶೇಖರಮೂರ್ತಿಯವರು (ಯಳಂದೂರು). ಜನರಲ್ ಎಲೆಕ್ಷನ್‌ನಲ್ಲಿ ಸೋತಿರುವವರಿಗೆ ಈ ಸಮಿತಿಯಲ್ಲಿ ಸ್ಥಾನ ಕೊಟ್ಟಿಲ್ಲವೆ ?

Mr. SPEAKER.—That does not arise.

ಶ್ರೀ ಜಿ. ಎ. ತಿಮ್ಮಪ್ಪಗೌಡರು (ಅರಕಲಗೂಡು).—ಹಾಸನ ಜಿಲ್ಲೆಯಲ್ಲಿ ಕಾಂಗ್ರೆಸ್ಸೇತರರು ಮೂರು ಜನರನ್ನು ತೆಗೆದುಕೊಂಡಿಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ಹೌದು, ನಿಜ.

Steps taken to attain self-sufficiency in Food.

Q.—57. **Sri T. HANUMAIAH** (Hiriyur—Scheduled Castes).—

Will the Government be pleased to state :—

(*a*) the steps taken by them to make Mysore self-sufficient in regard to food ;

(*b*) the actual shortage of rice, ragi, jola per year for the State ;

(*c*) the period required to make Mysore self-sufficient with regard to food ?

A.—**Sri H. SIDDAVEERAPPA** (Minister for Home Affairs and Agriculture).—

(*a*) The following G.M.F. Schemes have been drawn up in addition to the normal activities carried on by the Agriculture, Revenue and Public Works Departments. They are being executed in close co-operation with the departments concerned. Necessary funds are being made available for the execution of these works:—

1. Construction of irrigation wells.

2. Construction of major irrigation works.

3. Restoration of major and minor tanks and desilting of tanks.

4. Lift irrigation in river valleys.

5. Construction and improvement of river, tank and feeder channels.

6. Land improvement schemes including drainage and clearance of swamps in marshy areas, reclamation of aline and alkaline lands, construction of pick-ups, contour bunding, terracing, etc.

7. Distribution of pure seeds to to the ryots at concession rates.

8. Encouraging the preparation and distribution of urban and rural compost.

9. Supply of agricultural implements to the cultivators.

10. Supply of Tractor and Bulldozer services.

11. Supply of tractors, Diesel oil engine pump sets, electrical pump sets and Persian wheels on Hire Purchase System to the ryots charging only a nominal interest.

12 Taking timely action for the protection of food crops against pests, diseases and wild animals.

13. Liberal grants of new Government fallow lands, date groves and Amrit Mahal Kavals to the ryots for cultivation.

14. Liberal grant of takavi and land improvement loans to the needy agriculturists.

15. Encouraging the starting of co-operative farms.

16. Encouraging the cultivation of subsidiary food crops like Tapioca in Malnad areas.

17. Grant of manure loans to the agriculturists.

18. 'Kar Ragi and Kar Paddy Campaign' in Mandya District.

(*b*) Average over the last seven years is as follows :—

Rice	...	41,898 tons
Wheat	...	40,176 tons
Millets	...	27,622 tons

(*c*) It is hoped that self-sufficiency in Mysore State will be reached when all the irrigation and power schemes taken up by the State Government are completed and the entire atchkats programmed are brought under irrigation and necessary funds are made available.

ಶ್ರೀ ಟಿ. ಹನುಮಯ್ಯನವರು.—ಕಳೆದ ಏಳುವರ್ಷಗಳಲ್ಲಿ ಪ್ರತಿವರ್ಷವೂ ಕಡಮೆಬಿದ್ದ ಪ್ರಮಾಣ ಕೇಳಿರುವುದಕ್ಕೆ ಅಕ್ಕಿ 41,898 ಟಿಕ್, ಗೋಧಿ 40,176 ಟಿಕ್, ಇತರ ಧಾನ್ಯಗಳು 27,622 ಟಿಕ್ ಎಂದು ಪಾತ್ರ ಕೊಟ್ಟಿದೆ, ಕಳೆದ ಏಳುವರ್ಷಗಳಲ್ಲಿ ಪ್ರತಿವರ್ಷವೂ ಎಷ್ಟು ಕಡಮೆಬಿದ್ದಿದೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಸರಾಸರಿ ಲೆಕ್ಕ ಮಾಡಿ ಸ್ವಲ್ಪ ಹೆಚ್ಚುಕಡಮೆ ಇಷ್ಟು ಕಡಮೆಬೀಳುತ್ತಿದೆ ಎಂದು ಲೆಕ್ಕಪಾಡಿ ಕೊಟ್ಟಿದ್ದೇವೆ.

ಶ್ರೀ ಟಿ. ಹನುಮಯ್ಯನವರು.—ಅಕ್ಕಿ 41,898 ಟಿಕ್ ಎಂದಿದೆ. ಪ್ರತಿವರ್ಷವೂ ಇಷ್ಟು ಖೋತಾ ಬೀಳುತ್ತದೆಯೋ ಅಥವಾ 7 ವರ್ಷಗಳಿಗೆ ಸೇರಿ ಇಷ್ಟೋ?

ಅಧ್ಯಕ್ಷರು.—ಸರಾಸರಿ 7 ವರ್ಷದ ಲೆಕ್ಕ ಎಂದು ಉತ್ತರದಲ್ಲಿದೆ; ಅದರಮೇಲೆ ಟೀಕೆ ಏನು?

ಶ್ರೀ ಟಿ. ಹನುಮಯ್ಯನವರು.—ಹೆಚ್ಚು ಬೆಳೆ ಬೆಳೆಯುವುದಕ್ಕೆ ಇಷ್ಟಿಷ್ಟು ಅನುಕೂಲಗಳನ್ನು ಕೊಟ್ಟಿದ್ದೇವೆ ಎಂದು ತಿಳಿಸಿದೆ; ಎಷ್ಟು ವರ್ಷಗಳಿಂದ ಈ ಅನುಕೂಲತೆಗಳನ್ನೆಲ್ಲಾ ಕೊಟ್ಟಿರುವುದು?

ಶ್ರೀ ಎಚ್. ಸಿದ್ದವೀರಪ್ಪನವರು.—1949ನೆಯ ಇಸವಿಯಿಂದ.

ಶ್ರೀ ಟಿ. ಹನುಮಯ್ಯನವರು.—1952ನೆಯ ಇಸವಿಯೊಳಗೆ ಸ್ವಯಂಪೂರ್ಣತೆ ಉಂಟುಮಾಡುತ್ತೇವೆ ದು ಸರ್ಕಾರದವರು ಹೇಳಿದುದು ಗಮನದಲ್ಲಿಯೆ?

ಶ್ರೀ ಎಚ್. ಸಿದ್ದವೀರಪ್ಪನವರು.—Other conditions being equal ಆ ರೀತಿ ಆಗುತ್ತದೆಂದು ಹೇಳಿದ್ದರು.

ಶ್ರೀ ಟಿ. ಹನುಮಯ್ಯನವರು.—ಸ್ವಯಂಪರಿಪೂರ್ಣತೆ ಯಾಗಬೇಕಾದರೆ ಇನ್ನೆಷ್ಟು ವರ್ಷವಾಗುತ್ತದೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಯಾವಾಗ ಎಷ್ಟು ಬೇಕೋ ಅಷ್ಟು ಉತ್ಪತ್ತಿಯಾದರೆ ಆಗ ಆಗುತ್ತದೆ ಈ ಕಷ್ಟ ಕೊನೆಗಾಣುತ್ತದೆ.

ಶ್ರೀ ಟಿ. ಹನುಮಯ್ಯನವರು.—ಸ್ವಯಂಪೂರ್ಣತೆ ಹೊಂದುವಂತೆ ಮಾಡಲು ಬೇಕಾಗುವ ಕಾಲವೆಷ್ಟು ಎಂದು ಪ್ರಶ್ನೆಯಲ್ಲಿ ಕೇಳಿದ್ದೇನೆ; ಆದರೆ ಉತ್ತರದಲ್ಲಿ ಕಾಲವನ್ನು ತಿಳಿಸಿಲ್ಲ.

ಶ್ರೀ ಎಚ್. ಸಿದ್ದವೀರಪ್ಪನವರು.—ನಾನು ಜ್ಯೋತಿಷ್ಯ ಹೇಳಲಾರೆ.

ಶ್ರೀ ಟಿ. ಹನುಮಯ್ಯನವರು.—ನಾನು ಕೇಳುತ್ತಿರುವುದು ಅಂದಾಜು.

ಶ್ರೀ ಎಚ್. ಸಿದ್ದವೀರಪ್ಪನವರು.—ಅಂದಾಜನ್ನು ಮೇಲೆಯೇ ತಿಳಿಸಿದ್ದೇನೆ. ಪ್ರಯತ್ನವಾಡಿದ್ದೇವೆ. 18 ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸಮಾಡುತ್ತಿದ್ದೇವೆ; ಮಾನ್ಯ ಸದಸ್ಯರಂತೆಯೇ ಸರ್ಕಾರದ ವರಿಗೂ ಎಷ್ಟು ಬೇಗ ಆದರೆ ಅಷ್ಟೂ ಒಳ್ಳೆಯದೆಂಬ ಅಭಿಪ್ರಾಯ.

ಶ್ರೀ ಟಿ. ಹನುಮಯ್ಯನವರು.—ಅಂದಾಜಿನಮೇಲೆ ಎಷ್ಟು ಕಾಲವಾಗಬಹುದು?

Mr. SPEAKER.—The Hon'ble Member need not repeat questions.

ಶ್ರೀ ಎ. ಮುನಿಯಪ್ಪನವರು (ಹಿರಿಯೂರು).—ಹೆಚ್ಚು ಆಹಾರ ಬೆಳೆಯುವ ಯೋಜನೆ ಪ್ರಾರಂಭವಾದ ಲಾಗಾಯ್ತು ಕಡಮೆಬಿದ್ದಿರುವ ಪ್ರಮಾಣವನ್ನು ನರಿದೂಗಿಸಲು ಎಷ್ಟುಮಟ್ಟಿಗೆ ಸಾಧ್ಯವಾಗಿದೆ?

ಶ್ರೀ ಎಚ್. ಸಿದ್ದವೀರಪ್ಪನವರು.—ನೋಟೀಸ್.

Working of Co-operative and Collective Farms in Holalkere Taluk.

Q.—96. **Sri G. SIVAPPA** (Holalkere).—

Will the Government be pleased to state :—

(*a*) the number of co-operative and collective farms started in Holalkere Taluk ;

(*b*) the total number of acres brought under the plough in each farm ;

(*c*) the quantum of crops raised each year since their starting ;

(*d*) the total amount spent over each farm ;

(*e*) whether these farms are not working under loss?

A.—**Sri H. SIDDAVEERAPPA** (Minister for Home Affairs and Agriculture).—

(*a*) Three.